# ವಿವೇಕಾನಂದರ ಇತಿಹಾಸ ತತ್ತ್ವ

ಪ್ರೊ. ಎಸ್. ಶ್ರೀನಿವಾಸಾಚಾರ್

ವಿವೇಕಾನಂದರು ಪ್ರಸಿದ್ಧ ಇತಿಹಾಸಜ್ಞರಾಗಿದ್ದರೆಂಬುದನ್ನು ನಾವು ಮರೆಯುವಂತಿಲ್ಲ. ಅವರ ಇತಿಹಾಸ ತತ್ತ್ವದ ಸೂಕ್ಷ್ಮ ಪರಿಚಯವನ್ನು ನೀಡಿರುವ ಮಾನ್ಯ ಶ್ರೀನಿವಾಸಾಚಾರ್ ಅವರು ಇತಿಹಾಸ, ಸಂಸ್ಕೃತಿ ಕಲೆ ಮುಂತಾದ ವಿಷಯಗಳಲ್ಲಿ ಅಪಾರ ಪಾಂಡಿತ್ಯವುಳ್ಳವರು. ಈ ವಿಷಯಗಳ ಮೇಲೆ ಇವರ ಹಲವಾರು ಲೇಖನಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಮಹಾರಾಜ ಕಾಲೇಜ್ ಮತ್ತು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಅವರು ಈಗ ನಿವೃತ್ತ ಜೀವನ ನಡೆಸುತ್ತಿರುವರು.

ಪಾಶ್ಚಾತ್ಯರು ತಮ್ಮ ಜಿಜ್ಞಾಸಾ ಪರಂಪರೆಯಲ್ಲಿ Philosophy of History ಎಂಬ ತತ್ತ್ವಾನ್ವೇಷಣೆಯನ್ನು ಕೆಲವು ಶತಮಾನಗಳಿಂದ ಬೆಳೆಸಿಕೊಂಡು ಬಂದಿದ್ದಾರೆ. ಇದನ್ನು ನಾವು ಇತಿಹಾಸ ತತ್ತ್ವವೆಂದು ಭಾಷಾಂತರಿಸಿಕೊಂಡಿದ್ದೇವೆ. ವಾಸ್ತವಿಕವಾಗಿ ನೋಡಿದರೆ ಭಾರತದ ಪುರಾತನ ಬುದ್ಧಿಜೀವಿಗಳು ಮಾನವ ಚರಿತ್ರೆಯನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ ತತ್ತ್ವಸಿದ್ಧಾಂತಮಾಡಲು ಪ್ರಯತ್ನಿಸಲಿಲ್ಲ. ನಮ್ಮ ಸಾಂಪ್ರದಾಯಿಕ ಪರಂಪರೆಯಲ್ಲಿ ಈ ವಿಷಯವನ್ನು ತತ್ತ್ವದೃಷ್ಟಿಯಿಂದ ಪರಿಶೀಲಿಸಲೇ ಇಲ್ಲ ಎಂದರೆ ತಪ್ಪಾಗಲಾರದು. ಕಾಲಗತಿಯನ್ನು ಕೃತ, ತ್ರೇತ, ದ್ವಾಪರ, ಕಲಿಯೆಂದು ವಿಂಗಡಿಸಿದರು. ಸತ್ಯ ಅಥವಾ ಕೃತಯುಗದಿಂದ ಹಂತಹಂತವಾಗಿ ಮಾನವನ ಧಾರ್ಮಿಕ ಪ್ರವೃತ್ತಿಯು ಕ್ಷೀಣಿಸಿ ಕಲಿಯುಗದಲ್ಲಿ ಅಧೋಗತಿಗೆ ಬರುವುದೆಂಬ ಪೂರ್ವಿಕರ ಭಾವನೆ ನಮ್ಮ ಶ್ರೀಸಾಮಾನ್ಯರಲ್ಲಿ ಬಹುಮಟ್ಟಿಗೆ ಈಗಲೂ ಅನುಮೋದಿಸಲ್ಪಟ್ಟಿದೆ. ಅಂದಮೇಲೆ ಕಾಲಗತಿಯು ಕೇವಲ ರೇಖಾತ್ಮಕ ಮುನ್ನಡೆ (linear progression) ಅಲ್ಲವೆಂದೂ, ಕಾಲಗತಿಯು ಚಕ್ರದಂತೆ ಮನ್ನಡೆಯುವುದೆಂದೂ ಪರಿಗಣಿಸಿ ಮಾನವನ ಧರ್ಮಪ್ರವೃತ್ತಿಯೂ ಶಾಂತಿ ಸೌಹಾರ್ದವೂ ಕಲಿಯುಗದಲ್ಲಿ ಕ್ಷೀಣಿಸಿ ಹೋಗುವುದೆಂಬ ಭಾವನೆ ಅನೇಕರಲ್ಲಿ ಬೇರೂರಿಬಿಟ್ಟಿದೆ. ಇದು ಕಾಲಧರ್ಮದ ಕಟ್ಟಳೆ ಅಥವಾ ನಿಸರ್ಗ ನಿಯಮವೆಂಬ ಭಾವನೆಯೂ ಉಂಟು. ಹೀಗೆ ಹದಗೆಟ್ಟ ಪರಿಸ್ಥಿತಿಗೆ ಪರಿಹಾರವೇನು? ಇದನ್ನು ಹುಡುಕಲು ಹೋಗಿ ಪುರಾಣೇತಿಹಾಸಗಳ ಮೂಲಕ ಅವತಾರ ಪುರುಷರ ಜೀವನ ಸಾಧನೆಗಳನ್ನು ವರ್ಣಿಸಿ ದುಷ್ಟನಿಗ್ರಹ ಶಿಷ್ಟ ಪರಿಪಾಲನೆಯಾಗುವುದೆಂಬ ನಂಬಿಕೆಯೂ ನಮ್ಮಲ್ಲಿ ಅನೇಕರಿಗೆ ಇದೆ.

> ಯಾರು ಅತ್ಯಂತ ಕಡಮೆಯದರಲ್ಲಿ ಬಾಳಲು ಕಲಿತಿರುವರೊ ಅವರೇ ಕೊನೆಯಲ್ಲಿ ಗೆಲ್ಲುವರೆಂಬುದು ಐತಿಹಾಸಿಕ ಸತ್ಯ.
>
> *–ಸ್ವಾಮಿ ವಿವೇಕಾನಂದ*

ಮಾನವಕುಲದ ಐತಿಹಾಸಿಕ ಮುನ್ನಡೆ ಪ್ರಗತಿಪರವಾಗಿದೆಯೇ, ಹಾಗಿದ್ದಲ್ಲಿ ಈ ವಿಕಾಸವನ್ನು ಯಾವ ದೃಷ್ಟಿಯಿಂದ ಸಮರ್ಥಿಸಬಹುದು ಎಂಬ ಪ್ರಶ್ನೆ ಈಗಲೂ ಕೂಡ ಪ್ರಕೃತವಾಗಿಯೇ ಉಳಿದಿದೆ. ಈ ಪ್ರಶ್ನೆಗೆ ಯೋಗ್ಯವಾದ ಉತ್ತರ ಇನ್ನೂ ಸಿಕ್ಕಿಲ್ಲವೆನ್ನಬಹುದು. ಮಾನವ ಸಂಸ್ಕೃತಿಯ ಸಂಪನ್ಮೂಲವು ಕೇವಲ ಆರ್ಥಿಕವೋ ಅಥವಾ ಕೈಗಾರಿಕಾಪ್ರಧಾನವೋ ಅಥವಾ ಧರ್ಮಪ್ರಧಾನವೋ ಇಲ್ಲವೇ ದೈವೇಚ್ಛೆಯೋ ಅದೂ ಅಲ್ಲದೆ ತಾಂತ್ರಿಕ ವಿಜ್ಞಾನ ಪ್ರಧಾನವೋ ಇವೆಲ್ಲವೂ ಆಯಾ ತತ್ತ್ವಜ್ಞರ ದೃಷ್ಟಿಕೋಣವನ್ನೇ ಅವಲಂಬಿಸಿದೆ. ಸಮಗ್ರ ದೃಷ್ಟಿಯಿಂದ ನೋಡಿದರೆ ಈ ಒಂದೊಂದರಲ್ಲೂ ಸತ್ಯಾಂಶವೂ ಉಂಟು, ಅತಿಶಯೋಕ್ತಿಯೂ ಉಂಟು. ತತ್ತ್ವಾನ್ವೇಷಣೆಯೆಂಬುದು ಬುದ್ಧಿಜೀವಿಗಳಲ್ಲಿ ಸತತವೂ ಅಭಿವ್ಯಕ್ತವಾಗಿರುವ ಚಿಂತನಾ ಪ್ರವೃತ್ತಿ. ಈ ವಿಷಯವನ್ನು ಕೂಲಂಕಷವಾಗಿಯೂ ನಿಷ್ಪಕ್ಷಪಾತವಾಗಿಯೂ ಪರಿಶೀಲಿಸುವ ದೃಢ ಮನೋಭೀಷ್ಟವು ಸ್ವಾಮಿ ವಿವೇಕಾನಂದರಲ್ಲಿ ಎದ್ದುಕಾಣುತ್ತದೆ.

"ಇತಿಹಾಸವೇ ಅವರ ಕೋಟೆ" ಎಂದು ಸೋದರಿ ನಿವೇದಿತಾ ಸ್ವಾಮಿ ವಿವೇಕಾನಂದರ ಬಗ್ಗೆ ಹೇಳಿದ್ದಾರೆ. ಅವರ ಸ್ನಾತಕ ಪದವಿಯಲ್ಲಿ ಇತಿಹಾಸ ಒಂದು ಅಧ್ಯಯನ ವಿಷಯವಾಗಿತ್ತು ಮತ್ತು ಅದರ ಆಳ ಅಧ್ಯಯನ ನಡೆಸಿದ್ದರು. ಸ್ನಾತಕ ಪದವಿಗೆ ಮುಂಚೆಯೇ, ತಮ್ಮ ಕೌಮಾರ್ಯದಲ್ಲಿಯೇ, ವಿವೇಕಾನಂದರು ಗಿಬ್ಬನ್‌ರವರ *History of Rome* ಗ್ರಂಥದ ಎಲ್ಲ ಸಂಪುಟಗಳನ್ನೂ ಓದಿ ಮುಗಿಸಿದ್ದರು. ಪಾಶ್ಚಾತ್ಯ ತತ್ತ್ವಗಳ ಪರಿಚಯವನ್ನು ಮಾಡಿಕೊಂಡು, ಅಮೆರಿಕ ಮತ್ತು ಯೂರೋಪಿನ ನಾನಾ ದೇಶಗಳಲ್ಲಿ ತಿರುಗಾಡಿ ತಮ್ಮ ಯೋಗದೃಷ್ಟಿಯಿಂದ ಭಾರತದ ಭವಿಷ್ಯದ ಬಗ್ಗೆ ಮಾತನಾಡಿದ್ದಾರೆ. ರಾಮಕೃಷ್ಣ ಪರಮಹಂಸರ ಭಕ್ತಿ ಸಾಗರದಲ್ಲಿ ಮಿಂದು ಅವರ ಮನೋವೈಶಾಲ್ಯದಿಂದ ಪ್ರಭಾವಿತರಾಗಿದ್ದ ಈ ಮಹಾಪುರುಷರು ಮಾಡಿರುವ ಅವಲೋಕನವು ಈಗಲೂ ನಮಗೆ ಸ್ಫೂರ್ತಿದಾಯಕವಾಗಿರುವುದು. ಪಾಶ್ಚಾತ್ಯ ಜನ ಜೀವನದಲ್ಲಿ ಪ್ರಧಾನವಾಗಿ ಕಂಡುಬರುವ ವಿಜ್ಞಾನ ಪ್ರಗತಿಯಲ್ಲೂ ಭೌತಿಕ ಮನೋವೃತ್ತಿಯಲ್ಲೂ ಪ್ರದರ್ಶಿತವಾಗಿರುವ ಗುಣಾವಗುಣಗಳನ್ನು ತೂಕಮಾಡಿ, ಪ್ರಕೃತ ಭಾರತದಲ್ಲಿ ರೂಪಗೊಂಡಿರುವ ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ದುಃಸ್ಥಿತಿಯನ್ನು ನೋಡಿ ಸ್ವಾಮೀಜಿಯು ಎದೆಗುಂದಲಿಲ್ಲ. ತಮ್ಮ ಬರವಣಿಗೆಗಳಲ್ಲಾಗಲೀ, ಪ್ರವಚನಗಳಲ್ಲಾಗಲೀ ಅವರು ಹೃದಯಾಂತರಾಳದಿಂದ ಎತ್ತಿಹಿಡಿದ ಮಾತು ನಿರಾಶೆಯಲ್ಲಿ ಮುಳುಗಿದ್ದ ಭಾರತೀಯರ ಪುನರುತ್ಥಾನಕ್ಕೆ ತಳಹದಿಯಾಯಿತು. "ಉತ್ತಿಷ್ಠತ ಜಾಗ್ರತ"

ಎಂಬ ಅವರ ರಣಗರ್ಜನೆ ಭಾರತೀಯರನ್ನು ಮೂಲೆಮೂಲೆಯಲ್ಲೂ ಎಚ್ಚರಿಸಿತು.

ಸ್ವಾಮೀಜಿಯವರು ತಮ್ಮದೇ ಆದ ತತ್ತ್ವವನ್ನು ಪ್ರತಿಪಾದಿಸಲಿಲ್ಲ. ಅವರ ದೃಷ್ಟಿಕೋಣವು ಕೊನೆಯವರೆಗೂ ಆಧ್ಯಾತ್ಮಿಕವಾಗಿಯೇ ಉಳಿಯಿತು. ಇದಕ್ಕನುಗುಣವಾಗಿಯೇ ಅವರ ಇತಿಹಾಸದ ನಿರೂಪಣೆಯೂ ಇದೆ: "ನಾಗರಿಕತೆಗಳ ಇತಿಹಾಸವೆಂದರೆ ಭೌತದ್ರವ್ಯದಲ್ಲಿ ಚೈತನ್ಯವನ್ನು ಹೆಚ್ಚು ಹೆಚ್ಚು ಕಾಣುತ್ತ ಹೋಗುವುದು" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. (ಕೃತಿಶ್ರೇಣಿ, ೫.೭೭). ಆದರೂ ಸಹ ವಿವೇಕಾನಂದರು ಜಡವಾದದ ಗುಣಾಂಶಗಳನ್ನು ಕಡೆಗಣಿಸಲಿಲ್ಲ. ಸ್ವಾಮಿ ವಿವೇಕಾನಂದರ ಪ್ರಕಾರ ಇತಿಹಾಸದುದ್ದಕ್ಕೂ ಜಡವಾದ ಮತ್ತು ಆಧ್ಯಾತ್ಮಿಕತೆಗಳೆರಡೂ ತಮ್ಮದೇ ಆದ ಪಾತ್ರ ವಹಿಸುತ್ತಿರುವುವು. ಒಂದು ಹಕ್ಕು ಬಾಧ್ಯತೆಗಳನ್ನು ನಿರ್ಮಿಸುವುದು, ಮತ್ತೊಂದು ಒಡೆಯುವುದು. ವಿವೇಕಾನಂದರ ಐತಿಹಾಸಿಕ ದೃಷ್ಟಿಯಲ್ಲಿ ಎಷ್ಟೊಂದು ನಿರ್ಲಿಪ್ತತೆ ಇದೆ ಎಂಬುದನ್ನು ಈ ಭಾವನೆ ಸೂಚಿಸುತ್ತದೆ. ಆಧ್ಯಾತ್ಮಿಕತೆಯು ಹಕ್ಕು ಬಾಧ್ಯತೆಗಳನ್ನು ನಿರ್ಮಿಸಲು ತೊಡಗಿದಾಗ ಅದನ್ನು ಖಂಡಿಸಲು ಅವರು ಸ್ವಲ್ಪವೂ ಹಿಂಜರಿಯಲಿಲ್ಲ.

ಅವರ ಅಭಿಪ್ರಾಯದಲ್ಲಿ, ಯಾವ ವಿಚಾರಸರಣಿಯೇ ಆಗಲಿ, ಅದರಲ್ಲಿ ಧರ್ಮಕ್ಕೂ ಆಧ್ಯಾತ್ಮಿಕ ಅನುಭವಕ್ಕೂ ಸ್ಥಾನಮಾನವೂ ಘನತೆಯೂ ಇಲ್ಲದೇ ಹೋದಲ್ಲಿ ಆ ತತ್ತ್ವವು ಏಕಪಕ್ಷೀಯವಾಗಿಯೇ ಉಳಿದು ಮಾನವ ಪ್ರಗತಿಗೆ ಹಿತಕಾರಿಯಾಗಲಾರದು. ಸ್ವಾಮೀಜಿ ೧೮೯೪ರ ಫೆಬ್ರುವರಿಯಲ್ಲಿ ಪ್ಯಾಸಿಡೋನ(ಅಮೆರಿಕ)ದಲ್ಲಿ ಮಾಡಿದ ಒಂದು ಭಾಷಣದಲ್ಲಿ ಮಾನವ ಸಂಸ್ಕೃತಿಯ ಬಗ್ಗೆ ಹೇಳಿದ ಕೆಲವು ಅಂಶಗಳು ಗಮನಾರ್ಹ. ವಿವೇಕಾನಂದರ ಪ್ರಕಾರ ಇಡೀ ಜಗತ್ತಿನಲ್ಲಿಯೂ ಇತಿಹಾಸದಲ್ಲಿಯೂ ವಿವಿಧ ಕಲ್ಪಗಳನ್ನು ಕಾಣುತ್ತೇವೆ—ಐತಿಹಾಸಿಕ ಮುನ್ನಡೆ ಅಲೆಯೋಪಾದಿಯಲ್ಲಿ ಸಾಗುತ್ತದೆ. ಅವರು ಹೇಳುತ್ತಾರೆ: "ಹಿಂದೂಗಳ ಸಿದ್ಧಾಂತದಂತೆ ವಿಶ್ವವು ಅಲೆಗಳಂತೆ ಕಲ್ಪಾಂತರಗಳ ಮೂಲಕ ಚಲಿಸುತ್ತಿದೆ. ಅದು ಮೇಲೆದ್ದು ಶಿಖರವನ್ನು ಮುಟ್ಟಿ ಕೆಳಗೆ ಬೀಳುವುದು. ಮಾನವ ಜನಾಂಗದ ಪ್ರಗತಿಯೂ ಹೀಗೆಯೇ, ರಾಷ್ಟ್ರಗಳ ಇತಿಹಾಸವೂ ಹೀಗೆಯೇ. ಅವು ಏಳುವುವು, ಬೀಳುವುವು. ಎದ್ದಮೇಲೆ ಬೀಳುವುವು. ಪುನಃ ಹೆಚ್ಚು ರಭಸದಿಂದ ಏಳುವುವು. ಈ ಚಲನೆ ಯಾವಾಗಲೂ ಹೀಗೆಯೇ ಮುಂದುವರಿಯುತ್ತಿರುವುದು. ಧಾರ್ಮಿಕ ಜಗತ್ತಿನಲ್ಲಿಯೂ ಇದೇ ಚಲನೆ ಇರುವುದು. ಪ್ರತಿಯೊಂದು ದೇಶದ ಆಧ್ಯಾತ್ಮಿಕ ಇತಿಹಾಸದಲ್ಲಿಯೂ ಈ ಏಳು ಬೀಳು ಇದ್ದೇ ಇರುವುದು. ದೇಶವು ಅವನತಿಯ ಕಡೆ ಧಾವಿಸುವುದು, ಎಲ್ಲ ಚೂರು ಚೂರಾಗುವಂತೆ ತೋರುವುದು. ಪುನಃ ಅದು ಶಕ್ತಿಯನ್ನು ಸಂಗ್ರಹಿಸಿ ಮೇಲೇಳುವುದು. ಮತ್ತೊಂದು ದೊಡ್ಡ ಅಲೆ ಬರುವುದು. ಆ ಅಲೆಯ ತುತ್ತ ತುದಿಯಲ್ಲಿ ಭಗವಂತನ ಸಂದೇಶ ವಾಹಕನಾದ ಒಬ್ಬ ಮಹಾ ಪುರುಷನು ಯಾವಾಗಲೂ ಇರುವನು. (ಕೃ.ಶ್ರೇ. ೭.೨೩)

## ಪ್ರತಿಯೊಂದು ಮನೆಯಲ್ಲಿ ಮಾಡಿದ ಚಿಕ್ಕಪುಟ್ಟ ನಿಃಸ್ವಾರ್ಥ ಕರ್ಮಗಳಲ್ಲಿಯೇ ಜಗತ್ತಿನ ಇತಿಹಾಸವಿದೆ

*–ಸ್ವಾಮಿ ವಿವೇಕಾನಂದ*

ಅನೇಕರು ತಂತಮ್ಮ ಧರ್ಮವೇ ಸತ್ಯ ಎಂದು ನಂಬಿಕೊಂಡಿರುವುದು ಸ್ವಾಭಾವಿಕ. ಒಂದೇ ಪವಿತ್ರ ಗ್ರಂಥ; ಒಂದೇ ದೇವದೂತ, ಒಂದೇ ಅವತಾರ, ಒಂದೇ ಸಿದ್ಧಾಂತ ಹೀಗೆ ಸಾಧಿಸಲು ಹೋಗಿದ್ದ ವಿವಿಧ ಜನಾಂಗಗಳಿಗೂ, ರಾಷ್ಟ್ರಗಳಿಗೂ ಘರ್ಷಣವೇರ್ಪಟ್ಟು, ಧರ್ಮದ ಹೆಸರಿನಲ್ಲಿಯೇ ರಕ್ತಪಾತ ನಡೆದಿರುವುದನ್ನು ಇತಿಹಾಸದುದ್ದಕ್ಕೂ ನೋಡುತ್ತೇವೆ ಮತ್ತು ಈಗಲೂ ನೋಡುತ್ತಿದ್ದೇವೆ. ಇಂತಹ ಹೋರಾಟಗಳು ಇತಿಹಾಸದ ಮುನ್ನಡೆಗೆ ಬಾಧಕ, ಸಾಮಾಜಿಕ ಪ್ರಗತಿಗೆ ಮಾರಕ ಎಂಬುದು ವಿವೇಕಾನಂದರ ಅಭಿಮತ. ಅವರು ಹೇಳುತ್ತಾರೆ : "ನಾನು ಇತಿಹಾಸವನ್ನು ಅಧ್ಯಯನ ಮಾಡಿದಂತೆಲ್ಲ ಅಸಹನೆ ಸ್ಪರ್ಧೆಯ ಭಾವನೆ ತಪ್ಪು ಎಂದು ಅರ್ಥವಾಗುತ್ತಿದೆ. ಮಾನವನು ಮಾನವನೊಡನೆ ಯುದ್ಧ ಮಾಡದಿದ್ದರೆ ಅವನು ಪ್ರಗತಿ ಹೊಂದಲಾರ ಎಂದು ಕೆಲವರು ಹೇಳುತ್ತಾರೆ... ಆದರೆ ನನಗನಿಸುವಂತೆ ಪ್ರತಿಯೊಂದು ಯುದ್ಧವೂ ಪ್ರಗತಿಯನ್ನು ತ್ವರಿತಗೊಳಿಸುವ ಬದಲು ಅದನ್ನು ಐವತ್ತು ವರ್ಷ ಹಿಮ್ಮೆಟ್ಟಿಸಿದೆ. ಜನರು ಇತಿಹಾಸವನ್ನು ಬೇರೆ ಬೆಳಕಿನಿಂದ ನೋಡುವ ಕಾಲ ಬರುತ್ತದೆ. ಆಗ ಜ್ಞಾನೋದಯವಾಗುತ್ತದೆ, ಸ್ಪರ್ಧೆಯು ಕಾರ್ಯವೂ ಅಲ್ಲ, ಕಾರಣವೂ ಅಲ್ಲ, ಅದು ಮಾನವನ ಮುನ್ನಡೆಗೆ ಒಂದು ತಡೆ ಮತ್ತು ವಿಕಾಸಕ್ಕೆ ಅದರ ಆವಶ್ಯಕತೆಯೇ ಇಲ್ಲ ಎಂದು" (ಕೃ.ಶ್ರೇ. ೭.೨೮೦). ಈ ಸ್ಪರ್ಧಾತ್ಮಕ ಮನೋ ಭಾವವು ಅಳಿಸಿಹೋಗಿ ಸಾಮರಸ್ಯವು ಮಾನವ ಜನಾಂಗದಲ್ಲಿ ನಿಜವಾಗಿಯೂ ಪ್ರವಹಿಸಬೇಕಾದರೆ ಆಧ್ಯಾತ್ಮಿಕ ಮತ್ತು ತ್ಯಾಗ ಮನೋವೃತ್ತಿ ಪ್ರಚಲಿತವಾಗಬೇಕು ಎನ್ನುವುದೇ ಸ್ವಾಮೀಜಿಯವರ ನಂಬಿಕೆ, ಉಪದೇಶ. ಆಧ್ಯಾತ್ಮಿಕತೆಯೇ ಇತಿಹಾಸವನ್ನು ರೂಪಿಸುತ್ತದೆ ಎಂಬುದು ವಿವೇಕಾನಂದರ ನಿಲುವು. ಅವರು ಹೇಳುತ್ತಾರೆ: "ಕನ್‌ಫ್ಯೂಸಿಯಸ್, ಮೋಸೆಸ್, ಪೈಥಾಗೊರಸ್, ಬುದ್ಧ, ಕ್ರಿಸ್ತ, ಮಹಮ್ಮದ್, ಲೂಥರ್, ಕಾಲ್ವಿನ್, ಸಿಖ್ಖರು, ಥಿಯಾಸಫಿಸ್ಟರು— ಇವರೆಲ್ಲರ ಬೋಧನೆಯ ಸಾರವೇ ಮಾನವನ ಆಂತರಿಕದಿವ್ಯತೆ" (ಕೃ.ಶ್ರೇ. ೭. ೩೬೪).

ಈ ಮನೋವೃತ್ತಿಯು ಜನಜೀವನದಲ್ಲಿ ಹಾಸುಹೊಕ್ಕಾಗಿ ಪ್ರಗತಿಪಥಕ್ಕೆ ಬೆಂಬಲವಾಗಬೇಕಾದರೆ ಮಹಾಪುರುಷರ ಅವತರಣೆಯು ಅನಿವಾರ್ಯ. ನಾನಾ ದೇಶಗಳ, ನಾನಾ ಸಂಸ್ಕೃತಿಗಳ ಚರಿತ್ರೆಯನ್ನು ಅಧ್ಯಯನ ಮಾಡಿದರೆ ಈ ಅನುಮಾನವು ಬರುವುದರಲ್ಲಿ ಸಂದೇಹವಿಲ್ಲ. ಅಂದರೆ ಸ್ವಾಮೀಜಿಯವರ ಇತಿಹಾಸ ತತ್ತ್ವದಲ್ಲಿ ಪ್ರಗತಿಪರ ಭಾವನೆಗಳಾಗಲಿ, ಕ್ರಾಂತಿಕಾರಿ ಭಾವನೆಗಳಾಗಲಿ ಮಾನವರ ಜೀವನದಲ್ಲಿ ಅಭಿವ್ಯಕ್ತವಾಗಬೇಕಾದರೆ ಮಹಾನ್ ವ್ಯಕ್ತಿಗಳ ಮೂಲಕವೇ ಆಗಬೇಕು. ಧಾರ್ಮಿಕ

ಇತಿಹಾಸದಲ್ಲಿ ನಮ್ಮ ಗಮನಕ್ಕೆ ಬರುವ ಮುಖ್ಯ ಸಂಗತಿಯೆಂದರೆ, ಆಧ್ಯಾತ್ಮಿಕತೆಯು ಕ್ರಮೇಣ ಅವನತಿ ಹೊಂದಿ, ಪುರೋಹಿತರ ಪ್ರಾಬಲ್ಯ ಅಧಿಕವಾಗಿ, ಧಾರ್ಮಿಕ ಕ್ರಿಯಾವಿಧಿಗಳು ಮತ್ತು ವಿಶೇಷ ಹಕ್ಕುಬಾಧ್ಯತೆಗಳು ಜನಸಾಮಾನ್ಯರ ಶೋಷಣೆಗೆ ಕಾರಣವಾದಾಗ ಯಾವನೊ ಪ್ರವಾದಿ ಉದ್ಭವಿಸಿ ಆ ವಿಶೇಷ ಹಕ್ಕು ಬಾಧ್ಯತೆಗಳನ್ನೆಲ್ಲ ಖಂಡಿಸಿ ಶುದ್ಧ ಆಧ್ಯಾತ್ಮಿಕತೆಯನ್ನು ಪ್ರತಿಷ್ಠಾಪಿಸುತ್ತಾನೆ. ಯಹೂದಿ ಧರ್ಮದಲ್ಲಿ ಅನೇಕ ಪ್ರವಾದಿಗಳು ಈ ಕಾರ್ಯ ಮಾಡಿದುದನ್ನು ನಾವು ಓದುತ್ತೇವೆ. ಇವರಲ್ಲಿ ಪರಮಶ್ರೇಷ್ಠನು ಯೇಸುಕ್ರಿಸ್ತ. ಭಾರತದಲ್ಲಿಯೂ ಶ್ರೀಕೃಷ್ಣ, ಬುದ್ಧ, ಮಹಾವೀರ ಮುಂತಾದವರು ಈ ಕಾರ್ಯವನ್ನು ಮಾಡಿದರು. "ಪುರೋಹಿತ ಶಕ್ತಿಯ ವಿರೋಧಿಗಳಾಗಿ, ಧರ್ಮದ ಹೆಸರಿನಲ್ಲಿರುವ ಹರಳುಗಟ್ಟಿದ ಹಕ್ಕು ಬಾಧ್ಯತೆಗಳ ವಿರೋಧವಾಗಿ ಪ್ರವಾದಿಗಳ ಮುಖ್ಯ ಪಾತ್ರವನ್ನು ಸ್ವಾಮಿ ವಿವೇಕಾನಂದರು ಸ್ಪಷ್ಟವಾಗಿ ಚಿತ್ರಿಸಿರುವರು. ಅವರಿಗೆ ಮುಂಚೆಯಾಗಲಿ ಅಥವಾ ಅನಂತರವಾಗಲಿ ಬೇರೆ ಯಾವ ಇತಿಹಾಸಕಾರರೂ, ಅಥವಾ ಬೇರೆ ಯಾರೇ ಆಗಲಿ, ಈ ಕಾರ್ಯವನ್ನು ಮಾಡಲಿಲ್ಲ." (Santwana Dasgupta, *Vivekananda —The Prophet of Human Emancipation*, p. 151)

ಪ್ರಾಚೀನ ಭಾರತದ ಭವ್ಯಪರಂಪರೆಯಲ್ಲಿ ಕ್ರಾಂತಿಕಾರಿ ಘಟನೆಗಳು ಅನೇಕಸಲ ಉಂಟಾಗಿವೆ. ಕರ್ಮಕಾಂಡದ ಯಜ್ಞಯಾಗಾದಿ ಪ್ರಕ್ರಿಯೆಗಳ ನಿರರ್ಥಕತ್ವವನ್ನು ಸಾಧಿಸಲು ಭಗವಾನ್ ಬುದ್ಧನಂತಹ ಮಹಾವ್ಯಕ್ತಿಯ ಅವತರಣವಾಯಿತು. ವೈದಿಕ ಸಂಸ್ಕೃತಿಯಲ್ಲಿ ಜ್ಞಾನಕಾಂಡಕ್ಕೆ (ಉಪನಿಷತ್ತು) ಪ್ರಾಮುಖ್ಯ ಸಿದ್ಧಿಸಿತು. ಈ ಕ್ರಾಂತಿಯುಗದಲ್ಲಿ ಭಗವಾನ್ ಮಹಾವೀರನು ಪ್ರತಿಪಾದಿಸಿದ, ಧರ್ಮಪ್ರಧಾನ ಮತವು ಈ ಕ್ರಾಂತಿಯನ್ನು ಮತ್ತಷ್ಟು ಪುಷ್ಟೀಕರಿಸಿ, ಪುರೋಹಿತ ಪ್ರಾಬಲ್ಯಕ್ಕೆ ಧಕ್ಕೆಯೊಡ್ಡಿತು. ಕಾಲಕ್ರಮೇಣ ಹಿಂದೂ ಧರ್ಮವು ಬೌದ್ಧ ಮತ್ತು ಜೈನಧರ್ಮಗಳ ಸಾತ್ವಿಕ ಭಾವನೆಗಳನ್ನು ಅಳವಡಿಸಿಕೊಂಡು ಉತ್ತಮ ಸ್ಥಿತಿಯನ್ನು ಪಡೆಯಿತು. ಆದರೆ ಪುನಃ ಪುರೋಹಿತಷಾಹಿಯು ರಾಜಷಾಹಿಯೊಂದಿಗೆ ಸಂಘಟಿಸಿ ಸಮಾಜವ್ಯವಸ್ಥೆಯಲ್ಲಿ ಮೇಲುಕೀಳು ಭಾವನೆಯನ್ನು ಮೂಡಿಸಿ ದುರ್ಬಲಗೊಳಿಸಿತು. ಈ ಕಾರಣದಿಂದ ಪರಕೀಯರ ಧಾಳಿಗಳನ್ನು ಎದುರಿಸಲು ನಿಶ್ಯಕ್ತವಾಯಿತು.

ಸ್ವಾಮೀಜಿಯವರ ದೃಷ್ಟಿಯಲ್ಲಿ ಮೌಲ್ಯಾಧಾರಿತ ಜೀವನ, ಸುವ್ಯವಸ್ಥಿತ ಆಡಳಿತ, ಸ್ತ್ರೀಶಿಕ್ಷಣ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರವೃತ್ತಿ, ವೈಜ್ಞಾನಿಕ ಮನೋಭಾವ ಇವೆಲ್ಲವೂ ಸಂಘಟಿಸಿದರೇ ಭಾರತದ ಭವಿಷ್ಯವು ಭವ್ಯವಾಗುವುದರಲ್ಲಿ ಸಂದೇಹವಿಲ್ಲ. ಪಾಶ್ಚಾತ್ಯರಲ್ಲಿ ಕಂಡುಬಂದ ಕೆಲವು ಗುಣಗಳನ್ನು ಅವರು ಪ್ರಶಂಸಿಸಿದ್ದಾರೆ. ಆ ದೇಶಗಳಲ್ಲಿ ಸ್ತ್ರೀಯರಿಗೆ ಇರುವ ಸ್ವಾತಂತ್ರ್ಯ, ಆ ಜನಾಂಗದ ಸಾಹಸ ಪ್ರವೃತ್ತಿ, ವೈಜ್ಞಾನಿಕ ಮನೋಭಾವ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಅವರು ತೋರಿಸಿಕೊಂಡು ಬಂದಿರುವ ಮುಂದಾಳುತನ, ಜ್ಞಾನಾರ್ಜನೆಯ ದಾಹ ಇವೇ ಮೊದಲಾದ ಗುಣಗಳನ್ನು ಭಾರತೀಯರು ಅನುಕರಿಸಬೇಕು. ಇದು ನಮ್ಮ ಸಾಂಸ್ಕೃತಿಕ ಪರಂಪರೆಗೆ ವಿರೋಧವಲ್ಲ. ಅವರಲ್ಲಿರುವ ರಜೋಗುಣವನ್ನೂ ಸಾಹಸಪ್ರವೃತ್ತಿಯನ್ನೂ ನಾವು ಅಳವಡಿಸಿಕೊಂಡರೆ ನಮ್ಮ ನೈತಿಕ, ಆಧ್ಯಾತ್ಮಿಕ ಪರಂಪರೆ ಕುಂಠಿತವಾಗುವುದಿಲ್ಲ. ನಮ್ಮ ದೇಶವು ಪ್ರವರ್ಧಮಾನವಾಗಬೇಕಾದರೆ ನಮ್ಮ ಮುಖಂಡರೂ, ಬುದ್ಧಿ ಜೀವಿಗಳೂ ದಲಿತರನ್ನೂ ದೀನರನ್ನೂ ಕೈಹಿಡಿದು ಮೇಲೆತ್ತಬೇಕು. ಸಾರ್ವಜನಿಕ ವಿದ್ಯಾಕೇಂದ್ರಗಳಲ್ಲಿ ಅವರಿಗೂ ಪ್ರವೇಶವಿರಬೇಕು. ನಮ್ಮ ಪಾರಂಪಾರಿಕ ಸಂಸ್ಕೃತಿಯಲ್ಲಿರುವ ಉತ್ತಮ ಭಾವನೆಗಳನ್ನೂ ಆಚಾರನಿಷ್ಠೆಯನ್ನೂ ಅವರಲ್ಲಿ ಪ್ರಚರಿಸಬೇಕು. ಈ ಸುಧಾರಣೆಗಳನ್ನು ಮಾಡಲು ನಾವು ಯಾವ ಕಾರಣದಿಂದಲೂ ಹಿಂಜರಿಯಬಾರದು. ಏನೇ ಆದರೂ ಭಾರತವು ಶತಶತಮಾನಗಳಿಂದ ಬೆಳೆಸಿಕೊಂಡು ಬಂದ ಮೌಲ್ಯ ಸಂಪತ್ತಿಗೆ ಚ್ಯುತಿ ಬರಲಾರದು.

ಹಾಗೆಯೇ ಭಾರತದ ವೇದಾಂತ ಮತ್ತು ಆಧ್ಯಾತ್ಮಿಕತೆಗಳನ್ನು ಪಶ್ಚಿಮದೇಶಗಳು ಅಳವಡಿಸಿಕೊಳ್ಳಬೇಕು. ಅವು ಆ ದೇಶಗಳಿಗೆ ಅವಶ್ಯಕ ಎಂದು ವಿವೇಕಾನಂದರು ನಂಬಿದ್ದರು. ನಾವು ಪಶ್ಚಿಮಕ್ಕೆ ವೇದಾಂತವನ್ನು ನೀಡಿ, ಅಲ್ಲಿನ ವಿಜ್ಞಾನ, ತಾಂತ್ರಿಕತೆ, ಸಾಮಾಜಿಕ ವ್ಯವಸ್ಥೆ ಮುಂತಾದವುಗಳನ್ನು ನಾವು ಅಳವಡಿಸಿಕೊಳ್ಳಬೇಕು. ಹೀಗೆ ಪರಸ್ಪರ ಕೊಟ್ಟುಕೊಳ್ಳುವುದರ ಮೂಲಕ ಪೂರ್ವಪಶ್ಚಿಮಗಳೆರಡಕ್ಕೂ ಅನುಕೂಲವಾಗುತ್ತದೆ. ಹಿಂದೆಯೂ ಈ ರೀತಿಯ ಭಾವ ವಿನಿಮಯವಾಗಿದೆ, ಈಗಲೂ ಆಗುತ್ತಿದೆ, ಹಾಗೆಯೇ ಮುಂದೆಯೂ ಆಗುತ್ತದೆ ಎಂಬುದು ವಿವೇಕಾನಂದರ ನಿಲುವು.

ಹಾಗೆಯೇ ಇತಿಹಾಸದುದ್ದಕ್ಕೂ ಹಲವು ಜನಾಂಗಗಳ ಮಿಶ್ರಣವಾಗಿದೆ. ಯಾವುದೇ ಜನಾಂಗವೂ ಸಂಪೂರ್ಣ ಪ್ರತ್ಯೇಕವಾಗಿ ಉಳಿಯಲಿಲ್ಲ. ವಿವೇಕಾನಂದರು ಹೇಳುತ್ತಾರೆ: "ಬೇರೆ ಬೇರೆ ಬಗೆಯ, ಬೇರೆ ಬೇರೆ ಮನೋಧರ್ಮದ ಜನರು, ನಾಗರಿಕರು ಮತ್ತು ಅನಾಗರಿಕರು ಅಥವಾ ದೇವತೆಗಳು ಮತ್ತು ಅಸುರರು ಪರಸ್ಪರ ಬೆರೆತು ಆಧುನಿಕ ಸಮಾಜ ನಿರ್ಮಾಣವಾಗಿರುವುದು" (ಕೃತಿಶ್ರೇಣಿ, ೩. ೩೮೩-೪). ಆದ್ದರಿಂದ ಯಾವ ಜನಾಂಗವನ್ನೇ ಆಗಲಿ ಪವಿತ್ರವೆಂದು ಕರೆಯಲಾಗುವುದಿಲ್ಲ, ಯಾವ ಜನಾಂಗವನ್ನೂ ಎಲ್ಲಕ್ಕಿಂತ ಶ್ರೇಷ್ಠ ಎನ್ನುವಂತಿಲ್ಲ.

ನಿರ್ದಿಷ್ಟ ರೂಪರೇಖೆಗಳನ್ನುಳ್ಳ ಒಂದು ಇತಿಹಾಸತತ್ತ್ವವನ್ನು ಸ್ವಾಮಿ ವಿವೇಕಾನಂದರು ಸೈದ್ಧಾಂತಿಕವಾಗಿ ಪ್ರತಿಪಾದಿಸದಿದ್ದರೂ ಸಮನ್ವಯಾತ್ಮಕವಾದ, ಮಾನವನಿಗೂ ಪ್ರಕೃತಿಗೂ ಸಂಬಂಧಪಟ್ಟ ಎಲ್ಲ ಅಂಶಗಳನ್ನೂ ಒಳಗೊಳ್ಳುವ ಮತ್ತು ಅಧ್ಯಾತ್ಮಕೇಂದ್ರಿತವಾದ ಇತಿಹಾಸತತ್ತ್ವವೇ ಅವರ ಮನಸ್ಸಿನಲ್ಲಿತ್ತು ಎಂಬುದನ್ನು ನಾವು ಊಹಿಸಬಹುದಾಗಿದೆ. ॐ

---

**ಸ್ವಾಮಿ ವಿವೇಕಾನಂದರು ಲಂಡನ್ನಿನಲ್ಲಿ ಒಮ್ಮೆ ಉಪನ್ಯಾಸ ನೀಡುತ್ತಿರುವಾಗ ಒಬ್ಬರು ಅವರನ್ನು ಪ್ರಶ್ನಿಸಿದರು : " ಆದರೆ ನಿಮ್ಮ ಋಷಿಗಳು ಏಕೆ ಇಂಗ್ಲೆಂಡಿಗೆ ಬಂದು ನಮಗೆ ಬೋಧಿಸಲಿಲ್ಲ ? " ಸ್ವಾಮೀಜಿ ಥಟ್ಟನೆ ಉತ್ತರಿಸಿದರು: "ಏಕೆಂದರೆ ಆಗ ಇಂಗ್ಲೇಂಡೇ ಇರಲಿಲ್ಲ. ಅವರು ಒಂದು ಕಾಡಿಗೆ ಬೋಧಿಸಬೇಕಾಗಿತ್ತೆ ?"**

ಸ್ಥಳದಾನ: ಶ್ರೀಬಾಲಾಜಿ ಇಂಡಸ್ಟ್ರೀಸ್,(ರೈಸ್ ಮಿಲ್), ದಾವಣಗೆರೆ